ಗ- ೩೨೧೯

ಕರ್ನಾಟಕ ಸರ್ಕಾರ

ಸಂ: ಅಪಜೀ 116 ಎಫ್‌ಎಪಿ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 09.03.2018

## ತಿದ್ದುಪಡಿ

****

ಸರ್ಕಾರದ ಆದೇಶ ಸಂಖ್ಯೆ: ಅಪಜೀ 116 ಎಫ್‌ಎಪಿ 2016, ದಿನಾಂಕ: 16.09.2016ರ ಆದೇಶ ಭಾಗದಲ್ಲಿನ ಕಂಡಿಕೆ-12ರಲ್ಲಿ "ರೈತರು ಸೌರಶಕ್ತಿ ಬೇಲಿ ನಿರ್ಮಾಣ ಕಾರ್ಯವನ್ನು ಅಧಿಕೃತಗೊಳಿಸಲಾಗಿರುವ ನಿರ್ಮಾಣದಾರರ (Empanelled Vendors) ಮೂಲಕ ನಿರ್ವಹಿಸತಕ್ಕದ್ದು" ಎಂಬುದರ ಬದಲಾಗಿ **"ರೈತರು ಸೌರಶಕ್ತಿ ಬೇಲಿ ನಿರ್ಮಾಣ ಮಾಡುವ ಕಾರ್ಯವನ್ನು ಅಧಿಕೃತಗೊಳಿಸಲಾಗಿರುವ ನಿರ್ಮಾಣದಾರರ (Empanelled Vendors) ಮೂಲಕ ನಿರ್ವಹಿಸತಕ್ಕದ್ದು, ಅಥವಾ ರೈತರು ತಾವೇ ಸ್ವತ: ಸೌರಶಕ್ತಿ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳುವುದಾದರೆ ಸರ್ಕಾರ ಅನುಮೋದಿಸಿದ ತಾಂತ್ರಿಕ ವಿವರಗಳನ್ನು ಪಾಲಿಸಿ ಅನುಷ್ಠಾನಗೊಳಿಸಬಹುದಾಗಿದೆ. ಸರ್ಕಾರದ ಅನುಮೋದಿತ ತಾಂತ್ರಿಕ ವಿವರಗಳಿಗಿಂತ ಉತ್ತಮ ಹಾಗೂ ಹೆಚ್ಚಿನ ಗುಣಮಟ್ಟವನ್ನು ಕಾಪಾಡಿಕೊಂಡರೂ ಸರ್ಕಾರ ನಿಗದಿಪಡಿಸಿದ ಪ್ರತಿ ಕಿ.ಮೀ.ಗೆ 1.15 ಲಕ್ಷಕ್ಕೆ ಮೀರದಂತೆ ಫಲಾನುಭವಿ ರೈತರಿಗೆ ಸಹಾಯಧನ ನೀಡಲಾಗುವುದು"** ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

BL 9/3

(ಹೆಚ್.ಎಸ್. ಭಾಗ್ಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ (ವನ್ಯಜೀವಿ), ಬೆಂಗಳೂರು.
12 MAR 2018
ಸಂಖ್ಯೆ ...............

12 MAR 2018

ಇವರಿಗೆ,

1) ಪ್ರಧಾನ ಮಹಾಲೇಖಪಾಲರು (ಜಿ ಮತ್ತು ಎಸ್ ಎಸ್ ಎ)/(ಇ ಮತ್ತು ಆರ್ ಎಸ್ ಎ)/(ಎ ಮತ್ತು ಇ) ಕರ್ನಾಟಕ, ಬೆಂಗಳೂರು-560 001.
2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ. ಬೆಂಗಳೂರು.
3) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ. ಬೆಂಗಳೂರು.
4) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ), ಅರಣ್ಯ ಭವನ, ಮಲ್ಲೇಶ್ವರಂ. ಬೆಂಗಳೂರು.
5) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರಸ್ಥಾನ ಮತ್ತು ಸಮನ್ವಯ) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
6) ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ಬೆಂಗಳೂರು.

....2

7) ನಿರ್ದೇಶಕರು (ಪಿ.ಎಫ್.ಡಿ) ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8) ಉಪ ನಿರ್ದೇಶಕರು, ಗಣಕ ಅಂತರ್ ಜಾಲ, ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
9) ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳು/ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ ಇವರಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರ ಮುಖಾಂತರ.
10) ಮಾನ್ಯ ಅರಣ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
11) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನ ಸೌಧ, ಬೆಂಗಳೂರು.
12) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು/ ವಾರದ ಪತ್ರಿಕೆ.

Com - 4830

ಕರ್ನಾಟಕ ಸರ್ಕಾರದ ನಡವಳಿಗಳು

ಮುಖ್ಯ ... ಬೆಂಗಳೂರು.
21 SEP 2016
ಸಂಖ್ಯೆ:..........

ವಿಷಯ : ಸೌರಶಕ್ತಿ ಬೇಲಿ ನಿರ್ಮಿಸಿಕೊಳ್ಳುವ ರೈತರಿಗೆ ಶೇ 50%ರಷ್ಟು ಸಹಾಯಧನ ಸೌಲಭ್ಯವನ್ನು ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ – ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ : ಸರ್ಕಾರಿ ಆದೇಶ ಸಂಖ್ಯೆ: ಅಪಜೀ 94 ಎಫ್‌ಎಪಿ 2014 ದಿನಾಂಕ:13.08.2014

****

**ಪ್ರಸ್ತಾವನೆ:**

ಮೇಲೆ ಓದಲಾದ ದಿನಾಂಕ:13.08.2014ರ ಸರ್ಕಾರಿ ಆದೇಶದಲ್ಲಿ ರಾಜ್ಯ ಸರ್ಕಾರವು 2014–15ನೇ ಸಾಲಿನಿಂದ ಜಾರಿಗೆ ಬರುವಂತೆ ರಾಜ್ಯದ ಅರಣ್ಯದಂಚಿನಲ್ಲಿ ಬರುವಂತಹ ಹಿಡುವಳಿ ಜಮೀನುಗಳಲ್ಲಿ ರೈತರು ಬೆಳೆದ ಬೆಳೆಗಳನ್ನು ವನ್ಯಪ್ರಾಣಿಗಳ ದಾಳಿಯಿಂದ ರಕ್ಷಿಸಲು ಸೌರಶಕ್ತಿ ಬೇಲಿ ನಿರ್ಮಿಸಲು ಸಹಾಯಧನ ಒದಗಿಸುವ ಹೊಸ ಯೋಜನೆಯನ್ನು ಮತ್ತು ಅದಕ್ಕೆ ಹೊಂದಿಕೊಂಡ ಮಾರ್ಗಸೂಚಿಗಳೊಂದಿಗೆ ಜಾರಿಗೆ ತರಲಾಗಿದೆ. ಈ ಯೋಜನೆಯನ್ನು ಅರಣ್ಯ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಗಾಗಿ 2014–15 ಮತ್ತು 2015–16ನೇ ಸಾಲಿನಲ್ಲಿ ಒದಗಿಸಲಾಗಿದ್ದ ಅನುದಾನವು ಸಂಪೂರ್ಣವಾಗಿ ಬಳಕೆಯಾಗದೇ ಉಳಿದಿದ್ದು, ಈ ಯೋಜನೆಯು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ನಿರ್ದಿಷ್ಟಪಡಿಸಿರುವ ಮಾರ್ಗಸೂಚಿಗಳನ್ನು ಪರಿಷ್ಕರಿಸಿ, ಈ ಯೋಜನೆಯನ್ನು ಹೆಚ್ಚು ಆಕರ್ಷಣೀಯವಾಗಿ ಮಾಡುವುದು ಅಗತ್ಯವೆಂದು ಭಾವಿಸಲಾಗಿದೆ. ಅದರಂತೆ ರಾಜ್ಯ ಸರ್ಕಾರವು ರೈತರಿಗೆ ಸೌರಶಕ್ತಿ ಬೇಲಿ ನಿರ್ಮಿಸಲು ಸಹಾಯಧನ ನೀಡುವ ಯೋಜನೆಯ ಮಾರ್ಗಸೂಚಿಗಳನ್ನು ಪರಿಷ್ಕರಿಸಲು ನಿರ್ಧರಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ (ಮುಖ್ಯಸ್ಥರು ಅರಣ್ಯಪಡೆ) ಕರ್ನಾಟಕ, ಬೆಂಗಳೂರು
20 SEP 2016
ಸಂಖ್ಯೆ

**ಸರ್ಕಾರದ ಆದೇಶ ಸಂಖ್ಯೆ: ಅಪಜೀ 116 ಎಫ್‌ಎಪಿ 2016**
**ಬೆಂಗಳೂರು, ದಿನಾಂಕ:16.09.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು ಅರಣ್ಯದಂಚಿನಲ್ಲಿ ಬರುವಂತಹ ಹಿಡುವಳಿ ಜಮೀನುಗಳಲ್ಲಿ ರೈತರು ಬೆಳೆದ ಬೆಳೆಗಳನ್ನು ವನ್ಯಪ್ರಾಣಿಗಳ ದಾಳಿಯಿಂದ ರಕ್ಷಿಸಲು, ಸೌರಶಕ್ತಿ ಬೇಲಿ ನಿರ್ಮಿಸಲು ರೈತರಿಗೆ ಸಹಾಯಧನ ಒದಗಿಸುವ ಯೋಜನೆಗೆ ಸಂಬಂಧಿಸಿದಂತೆ ಹೊರಡಿಸಿರುವ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಪರಿಷ್ಕರಿಸಿ, ನಿಗಧಿಪಡಿಸಲಾಗಿದೆ:–

**(ಅ) ಸಹಾಯಧನ**

(1) ಸೌರಶಕ್ತಿ ಬೇಲಿ ಅಳವಡಿಸಲು ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ನಿರ್ದಿಷ್ಟ ತಾಂತ್ರಿಕ ಅಂಶಗಳನ್ವಯ ತಗಲಬಹುದಾದ ವೆಚ್ಚವನ್ನು ಗಣನೆಗೆ ತೆಗೆದುಕೊಂಡು ಒಂದು ಕಿ.ಮೀ. ಸೌರಶಕ್ತಿ ಬೇಲಿ ಅಳವಡಿಸಲು ರೂ.2.30 ಲಕ್ಷಗಳನ್ನು ನಿಗಧಿಪಡಿಸಲಾಗಿದೆ. ಇದರಲ್ಲಿ ಪ್ರತಿ ಕಿ.ಮೀ. ಸೌರಶಕ್ತಿ ಬೇಲಿ ನಿರ್ಮಾಣಕ್ಕೆ ರೈತರಿಗೆ ಶೇಕಡ 50 ರಷ್ಟು ಸಹಾಯಧನವನ್ನು ನೀಡತಕ್ಕದ್ದು.

**(ಆ) ನಿರ್ಮಾಣ ಮತ್ತು ನಿರ್ವಹಣೆ**

(2) ಸೌರಶಕ್ತಿ ಬೇಲಿ ನಿರ್ಮಾಣ ಯೋಜನೆಯನ್ನು ಅರಣ್ಯ ಇಲಾಖೆ ವತಿಯಿಂದ ನಿರ್ವಹಿಸುತ್ತಿರುವ ಪದ್ಧತಿಯನ್ನು ತಕ್ಷಣದಿಂದ ಕೈಬಿಡಲಾಗಿದೆ. ಭವಿಷ್ಯದಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ ಹಾಗೂ ನಿರ್ವಹಣೆ ಕೆಲಸವನ್ನು ರೈತರೇ ನಿರ್ವಹಿಸತಕ್ಕದ್ದು.

(3) ಸೌರಶಕ್ತಿ ಬೇಲಿ ನಿರ್ಮಾಣವನ್ನು ಇನ್ನು ಮುಂದೆ ಈ ಆದೇಶದೊಂದಿಗೆ ಲಗತ್ತಿಸಿದ ನಿರ್ದಿಷ್ಟ ತಾಂತ್ರಿಕ ಅಂಶಗಳನ್ನೊಳಗೊಂಡಂತೆ ರೈತರೇ ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ. ನಿರ್ದಿಷ್ಟ ತಾಂತ್ರಿಕ ಅಂಶಗಳನ್ನೊಳಗೊಂಡ ಸೌರಶಕ್ತಿ ಬೇಲಿ ನಿರ್ಮಾಣದ ವಿವರಗಳನ್ನು ಅನುಬಂಧದಲ್ಲಿ ಅಡಕಗೊಳಿಸಲಾಗಿದೆ. ಫಲಾನುಭವಿಗಳು ಸೌರಶಕ್ತಿ ಬೇಲಿಯನ್ನು ಅನುಬಂಧದಲ್ಲಿ ಅಡಕಗೊಳಿಸಿರುವ

.....2

ತಾಂತ್ರಿಕ ವಿವರಗಳಂತೆಯೇ ನಿರ್ಮಿಸತಕ್ಕದ್ದು. ಕರ್ನಾಟಕ ಅರಣ್ಯ ಇಲಾಖೆಯಿಂದ ಅಥವಾ ವಿದ್ಯುತ್ ಸರಬರಾಜು ಸಂಸ್ಥೆಯಿಂದ ಅಥವಾ ಮೂರನೆಯವರಿಂದ (Third Party) ನಿರ್ದಿಷ್ಟ ಮಾನದಂಡಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(4) ಸೌರಶಕ್ತಿ ಬೇಲಿಗಳ ನಿರ್ವಹಣಾ ಕಾರ್ಯವನ್ನು ಸಂಬಂಧಪಟ್ಟ ರೈತರೇ ಕೈಗೊಳ್ಳತಕ್ಕದ್ದು. ರೈತರು ನಿರ್ಮಿಸಿಕೊಂಡಿರುವ ಸೌರಶಕ್ತಿ ಬೇಲಿಗಳಿಗೆ ಅಥವಾ ಬೇಲಿಗಳಿಂದ ಯಾವುದೇ ಹಾನಿ ಉಂಟಾದಲ್ಲಿ ಅಥವಾ ಕಾರ್ಯನಿರ್ವಹಣೆ ನಿಂತು ಹೋದಲ್ಲಿ ಇದಕ್ಕೆ ಅರಣ್ಯ ಇಲಾಖೆಯು ಜವಾಬ್ದಾರಿಯಾಗುವುದಿಲ್ಲ.

**(ಇ) ಅರ್ಹತಾ ಮಾನದಂಡಗಳು**

(5) ರೈತರು ಗುಂಪಾಗಿ ಒಟ್ಟುಗೂಡಿ 1 (ಒಂದು) ಹೆಕ್ಟೇರ್‌ಗೆ ಕಡಿಮೆ ಇಲ್ಲದ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಸೌರಶಕ್ತಿ ಬೇಲಿ ನಿರ್ಮಾಣಕ್ಕೆ ಸಾಮೂಹಿಕವಾಗಿ ಮುಂದಾದಲ್ಲಿ ಅಂತಹ ಪ್ರಕರಣಗಳನ್ನು ಉತ್ತೇಜಿಸುವುದು.

(6) ವ್ಯಕ್ತಿಗತ ರೈತರ ಪ್ರಕರಣಗಳಲ್ಲಿ (ಮಧ್ಯಮ ಮತ್ತು ಸಣ್ಣ ವರ್ಗದ ರೈತರುಗಳು) ಹಿಡುವಳಿ ಜಮೀನು ಕನಿಷ್ಠ 0.4 ರಿಂದ 10 ಹೆಕ್ಟೇರ್ ಭೂಮಿ ಹೊಂದಿದವರ ಪ್ರಕರಣಗಳಲ್ಲಿ ಮಾತ್ರ ಸಹಾಯಧನ ಸೌಲಭ್ಯಕ್ಕೆ ಅರ್ಹರಿರುತ್ತಾರೆ. 10 ಹೆಕ್ಟೇರ್‌ಗಿಂತ ಹೆಚ್ಚು ಜಮೀನು ಹೊಂದಿರುವ ರೈತರುಗಳು ಸಹಾಯ ಧನಕ್ಕೆ ಅರ್ಹರಿರುವುದಿಲ್ಲ.

(7) ಅರಣ್ಯ ಅತಿಕ್ರಮಣವಾಗಿರುವ ಪ್ರಕರಣಗಳಲ್ಲಿ ರೈತರುಗಳು ಸೌರಶಕ್ತಿ ಬೇಲಿ ಅಳವಡಿಕೆಗೆ ಈ ಯೋಜನೆಯಡಿ ಸಹಾಯ ಧನಕ್ಕೆ ಅರ್ಹರಾಗುವುದಿಲ್ಲ.

(8) ಕಾಯ್ದಿಟ್ಟ ಅಥವಾ ರಕ್ಷಿತ ಅರಣ್ಯದ ಗಡಿ ಪ್ರದೇಶದಿಂದ 5 ಕಿ.ಮೀ ವ್ಯಾಪ್ತಿಯಿಂದ ದೂರವಿರುವ ರೈತರುಗಳ ಜಮೀನುಗಳಿಗೆ ಈ ಯೋಜನೆಯು ಅನ್ವಯಿಸುವುದಿಲ್ಲ.

(9) ಸೌರಶಕ್ತಿ ಬೇಲಿ ಅಳವಡಿಸುವಿಕೆಯು ಅರಣ್ಯದಲ್ಲಿ ಅಥವಾ ಗಡಿ ಪ್ರದೇಶದಲ್ಲಿ (ವಿಶೇಷವಾಗಿ ಜೀವಿ ಪರಿಸರ ದೃಷ್ಟಿಯಿಂದ ಮುಖ್ಯವಾದ ಪ್ರದೇಶಗಳಲ್ಲಿನ/ ಕಾರಿಡಾರುಗಳಲ್ಲಿನ ಎನ್‌ಕ್ಲೋಸರ್‌ಗಳು, ಅರಣ್ಯ ಹಕ್ಕು ಅಧಿನಿಯಮದ ಪ್ರದೇಶಗಳು, ಖಾಸಗಿ ಜಮೀನುಗಳು) ಆನೆಗಳ ಸಂಚಾರಕ್ಕೆ ಅಡ್ಡಿ ಅಥವಾ ಅಡಚಣೆ ಉಂಟು ಮಾಡುವಂತಿರಬಾರದು ಎಂಬುದನ್ನು ಇಲಾಖೆಯು ಖಚಿತಪಡಿಸಿಕೊಳ್ಳತಕ್ಕದ್ದು.

**(ಈ) ಸಹಾಯಧನ ಪಡೆಯುವ ವಿಧಾನ**

(10) ಸೌರಶಕ್ತಿ ಬೇಲಿ ನಿರ್ಮಾಣ ಮಾಡುವ ಪ್ರಸ್ತಾವನೆಯನ್ನು ರೈತರು ಅರಣ್ಯ ಇಲಾಖೆಯ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

(11) ಅರಣ್ಯ ಇಲಾಖೆಯ ಅಧಿಕಾರಿಗಳು ಸೌರಶಕ್ತಿ ಬೇಲಿ ನಿರ್ಮಾಣಕ್ಕಾಗಿ ರೈತರು ಸಲ್ಲಿಸಿದ ಪ್ರಸ್ತಾವನೆ/ಅರ್ಜಿಯನ್ನು ಸ್ಥಳ ಪರಿವೀಕ್ಷಣೆ ಮಾಡುವ ಮೂಲಕ ಸೂಕ್ತತೆ ಮತ್ತು ಅಗತ್ಯತೆಯನ್ನು ನಿರ್ಧರಿಸಿ, ರೈತರಿಗೆ ಸೌರಶಕ್ತಿ ಬೇಲಿ ನಿರ್ಮಾಣಕ್ಕೆ ಅನುಮತಿ ನೀಡತಕ್ಕದ್ದು.

(12) ರೈತರು ಸೌರಶಕ್ತಿ ಬೇಲಿ ನಿರ್ಮಾಣ ಕಾರ್ಯವನ್ನು ಅಧಿಕೃತಗೊಳಿಸಲಾಗಿರುವ ನಿರ್ಮಾಣದಾರರ (Empanelled Vendors) ಮೂಲಕ ನಿರ್ವಹಿಸತಕ್ಕದ್ದು.

(13) ರೈತರು ಸೌರಶಕ್ತಿ ಬೇಲಿ ನಿರ್ಮಾಣ ಕಾರ್ಯವನ್ನು

(i) ಕೈಗೆತ್ತಿಕೊಳ್ಳುವ ಪೂರ್ವದಲ್ಲಿ

(ii) ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುವಾಗ ಮತ್ತು

(iii) ನಿರ್ಮಾಣ ಕಾರ್ಯ ಮುಗಿದ ನಂತರ ಇಲಾಖಾ ಅಧಿಕಾರಿಗಳು GPS coordinate ಜೊತೆಗಿನ ಫೋಟೋಗಳನ್ನು ತೆಗೆಯಬೇಕು.

....3

(14) ರೈತರು ಕೈಗೊಳ್ಳುವ ಸೌರಶಕ್ತಿ ಬೇಲಿ ನಿರ್ಮಾಣ ಕಾಮಗಾರಿಯನ್ನು Third party inspection ಮೂಲಕ ಹಾಗೂ ಇಲಾಖಾ ಅಧಿಕಾರಿಗಳು ಪರಿವೀಕ್ಷಣೆ ಕೈಗೊಂಡು ಗುಣಮಟ್ಟ ಮತ್ತು ಸಮರ್ಪಕವಾಗಿ ನಿರ್ಮಾಣವಾಗಿರುವ ಬಗ್ಗೆ ದೃಢೀಕರಿಸಬೇಕು. ಈ ಪ್ರಕ್ರಿಯೆ ಮುಗಿದ ನಂತರ ಸೌರಶಕ್ತಿ ಬೇಲಿ ನಿರ್ಮಾಣ ಉದ್ದೇಶಕ್ಕಾಗಿ ಸರ್ಕಾರವು ನಿಗಧಿಪಡಿಸಿರುವ ಪ್ರತಿ ಕಿ.ಮೀ. ರೂ.2.30 ಲಕ್ಷ ದಲ್ಲಿ ಶೇ.50ರಷ್ಟು ಅಂದರೆ ರೂ.1.15 ಲಕ್ಷಗಳ ಸಹಾಯಧನವನ್ನು ರೈತರ ಬ್ಯಾಂಕ್ ಖಾತೆಗೆ ಆರ್‌ಟಿಜಿಎಸ್ (RTGS) ಮೂಲಕ ವರ್ಗಾಯಿಸತಕ್ಕದ್ದು. ನಿರ್ಮಾಣ ಕಾರ್ಯ ಮುಗಿದ ನಂತರ ಪರಿವೀಕ್ಷಣೆ ಮತ್ತು ಸಹಾಯಧನ ವರ್ಗಾವಣೆ ಪ್ರಕ್ರಿಯೆಯನ್ನು ಆದಷ್ಟು ಬೇಗ ಗರಿಷ್ಠ ಎರಡು ವಾರಗಳ ಅವಧಿಯಲ್ಲಿ ಕಡ್ಡಾಯವಾಗಿ ಪೂರ್ಣಗೊಳಿಸತಕ್ಕದ್ದು.

(15) ಸೌರಶಕ್ತಿ ಬೇಲಿ ನಿರ್ಮಾಣ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (NABARD) ನಿರ್ದಿಷ್ಟಪಡಿಸಿರುವ ಮಾರ್ಗಸೂಚಿಗಳು/ ಸಲಹೆಗಳನ್ನು ಸೂಕ್ತವಾಗಿ ಅಳವಡಿಸಿಕೊಳ್ಳತಕ್ಕದ್ದು.

(16) ಸಮರ್ಪಕ ಒಡಂಬಡಿಕೆಯ ನಿವೇದನ ಪತ್ರದ ಆಧಾರದಲ್ಲಿ ಸಹಾಯ ಧನವನ್ನು ವರ್ಗಾಯಿಸಬಹುದು.

**(ಉ) ಇತರ ಷರತ್ತುಗಳು**

(17) ಸೌರಶಕ್ತಿ ಬೇಲಿ ಅಳವಡಿಸಿದ ದಿನಾಂಕದಿಂದ ಹತ್ತು (10) ವರ್ಷದ ಅವಧಿಗೆ ವನ್ಯಪ್ರಾಣಿಗಳಿಂದ ಬೆಳೆ ಹಾನಿ ಉಂಟಾದಲ್ಲಿ ಸಂಬಂಧಿಸಿದ ರೈತರಿಗೆ ಯಾವುದೇ ಪರಿಹಾರ ನೀಡಲಾಗುವುದಿಲ್ಲ. ಯಾವುದೇ ರೀತಿಯ ನಷ್ಟ ಅಥವಾ ಕಳ್ಳತನವಾದರೆ ಫಲಾನುಭವಿಗಳೇ ಜವಾಬ್ದಾರರಾಗುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಯು.ಹೆಚ್.ನಾರಾಯಣಸ್ವಾಮಿ)** 16.09.16.
ಸರ್ಕಾರದ ಉಪ ಕಾರ್ಯದರ್ಶಿ,
ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ.

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - 01 ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.

1) ಪ್ರಧಾನ ಮಹಾಲೇಖಪಾಲರು (ಜಿ ಮತ್ತು ಎಸ್ ಎಸ್ ಎ)/(ಇ ಮತ್ತು ಆರ್ ಎಸ್ ಎ)/(ಎ ಮತ್ತು ಇ) ಕರ್ನಾಟಕ, ಬೆಂಗಳೂರು-560 001.
2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ. ಬೆಂಗಳೂರು.
3) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ. ಬೆಂಗಳೂರು.
4) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ), ಅರಣ್ಯ ಭವನ, ಮಲ್ಲೇಶ್ವರಂ. ಬೆಂಗಳೂರು
5) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರಸ್ಥಾನ ಮತ್ತು ಸಮನ್ವಯ) ಅರಣ್ಯ ಭವನ, ಮಲ್ಲೇಶ್ವರಂ. ಬೆಂಗಳೂರು.
6) ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ಬೆಂಗಳೂರು.
7) ನಿರ್ದೇಶಕರು (ಪಿ.ಎಫ್.ಡಿ) ಯೋಜನಾ ಇಲಾಖೆ. ಬಹುಮಹಡಿಗಳ ಕಟ್ಟಡ, ಬೆಂಗಳೂರು.
8) ಉಪ ನಿರ್ದೇಶಕರು, ಗಣಕ ಅಂತರ್ ಜಾಲ, ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
9) ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳು/ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ ಇವರಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರ ಮುಖಾಂತರ.
10) ಮಾನ್ಯ ಅರಣ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
11) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನ ಸೌಧ, ಬೆಂಗಳೂರು.
12) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು/ ವಾರದ ಪತ್ರಿಕೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 116 ಎಫ್‌ಎಪಿ 2016, ದಿನಾಂಕ: 16.09.2016ರ ಅನುಬಂಧ

## ಸೌರಶಕ್ತಿ ಬೇಲಿ ನಿರ್ಮಾಣ ಮಾಡಲು ಅನುಮೋದಿತ ತಾಂತ್ರಿಕ ವಿವರಗಳು
## (Technical specification for solar fencing)

**Unit length : 1 Km**

| Sl. No. | Item of work | Quantity |
| --- | --- | --- |
| 1. | Installation of bottom insulated (5) five strands solar fence having 100 mtrs of section with pole to pole distance – 15 mtrs by using following materials with specified quality.<br>1. **Energizer- 1No.** with the following specifications.<br>• Must be from a reputed company<br>• Must confirm to IEC 603352-76 and all National and International standards of safety.<br>• Switch - high, medium and low power setting.<br>• Solar panel option to recharge 12 volt battery.<br>• Full & reduced power output terminals to operate - different fences independently.<br>• Should possess the following output characters<br>- Peak o/p voltage not more than 10 KV on 50 K load.<br>- O/p energy 3.5 J minimum<br>- Pulse duration 1.01-3.0 m. sec<br>- Pulse interval 1.1-1.4 sec<br>- Peak current 7.0-8.0 A-High<br>- RMS current 2.4-2.8 A-High<br>- Charge 1.0-1.4m C-High<br>- Fib, Energy 3.5-4.5 mCA-high<br>- Built in Alarm Unit.<br>- All weather proof.<br>2. **Solar PV Module- 1No.** with the following specification<br>• 120 watts, 12 volts rating with minimum 10 years warranty against manufacturing defects.<br>• Solar charge controller to regulate the charging of the battery.<br>3. **Module Stand – 1No.**<br>• With MS hot dip galvanized to minimum of 60 microns zinc Coating thickness tilted to 13-15 degrees.<br>4. **Reputed company Battery – 1No.**<br>• Must have 12 Volts, 100 AH maintenance free (Exide/Base) battery with at least 3 years guarantee.<br>5. **Lightening driver kit -1No.**<br>• Must be capable of diverting stray lightening.<br>• The diverter assembly must be adjustable for spark gaps.<br>• Adequate earthning to be provided.<br>6. **Earthning system – 4 Nos.**<br>• Must contain earth mixture capable of retaining moisture and 8 mm dia stainless steel rod-non rusting quality of 4 feet long.<br>7. **Strain Insulators – 100 Nos.**<br>• Must be of polycarbonate material and should withstand 4 feet | 1 Km. |


long.

8. **Reel Insulators – 100 Nos.**
   - Must be of virgin plastic material-poly-propylene or equivalent.
9. **High tensile wire – 5000 R. mts.** with the following specifications
   - 2.5-2.59 mm wire diameter.
   - High tensile wire with minimum of 230-300 gms/sqm zinc coating thickness.
   - UTS 140.5 kg/mm2
   - Beak strength of 740 kg.
10. **14g wire for binding reel insulators – 10 kgs.**
11. **Wire tightners – 50 Nos.** with the following specifications
    - In situ tightners for proper tensioning or wires.
    - Should be made from A1 alloy non-resting quality.
12. **Joining clamps – 50 Nos.** with the following specifications.
    - Positive locking mechanism.
    - Zinc coating of more than 25 microns.
13. **Warning signs – 10 Nos.**
    - Poly-ethylene plastic with statutory colors and signs
14. **Lead out cable 30 mtr.**
    - Must be double insulated withstanding 15 KV voltage and inner core wire must be hot dip galvanized. – 30 mtr.
15. **Post protection clamps – 100 Nos.**
    - Properly securing clamps, hot dip galvanized with fastening provision – 60 microns.
16. **Tool kit – 1 No.** should contain the followings
    - Wire tightner handle.
    - Twisting tool
    - Pilers
    - Double ended spanner for joining clamp tightening.
17. **Tension springs – 20 Nos.**
    - Capable of taking impression loads, should be galvanized.
18. **Corner/End/Pull thru' posts – 15 Nos.** with the following specifications
    - 50 NB class 'B' pipes – 8.0 feet long.
    - Hot dip galvanized to more than 60 microns. (GI) OR G.I Post ISI
    - Stay supports 25mm diameter with brackets also hot dip galvanized. (GI).
    - Must include fasteners.
19. **Intermediate posts – 60 Nos.** (Live posts) with the following specifications.
    - 25x25x3mm 'T' post or 16 MM TMT rod hot dip galvanized – more than 60 microns.
    - 8 feet height.
    - Bottom insulated to energizer the entire post.
20. **Digital Volt Meter – 1 No.**
21. **Civil Works (Corner post should be concreted)** - 1.0 Kms.
22. **Vegetation, cleaning – 1.0 Kms for 2 meter width**
23. **Transportation, erection & commissioning including all labour charges for 1.5 Kms.**
24. **Two years maintenance of Solar Fencing**

| | | |
|---|---|---|
| | • It includes repair & replacement of materials<br>• Weeding<br>• Maintenance of minimum 7 KV of voltage at all times<br>• Theft is also part of maintenance. | |

Note: The following items viz., energizer, solar module, battery, lightening diverter, tool kit, digital volt meter Would be used upto 3 Kms, costing between Rs.70000-75000. However even for less than 3 Kms of solar fencing one number each of the above items are a must. In view of this, the cost of solar fencing below 3 Kms would be significantly higher.

–ಸೋಲಾರ್ ತಂತಿ ಬೇಲಿ ನಿರ್ಮಾಣ



(ಯು.ಹೆಚ್.ನಾರಾಯಣಸ್ವಾಮಿ) 16.09.16
ಸರ್ಕಾರದ ಉಪ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.